2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ ಚನ್ನಗಿರಿ .

ಸಿಸಿ ನಂ. **12/2023**

ಹೆಸರುಃ ನಿರ್ಮಲ ಚಾಸಾಃ 2

ಗಂಡಃ ಡಾಃ ಬಸವರಾಜ ಫ್ರಾಸಾಃ 2

ವಯಸ್ಸುಃ 40

ಉದ್ಯೋಗಃ ಶಿಕ್ಷಕಿ

ವಾಸ ಸ್ಥಳಃ ದುಬೈ.

ಸಾಕ್ಷಿಗೆ ದಿನಾಂಕಃ 17.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ 1 ನನ್ನ ಅತ್ತೆ, ಚಾಸಾ 3 ನನ್ನ ಗಂಡ. 1 ನೇ ಆರೋಪಿ ನನ್ನ ಭಾವ. ದಿಃ 11.07.2022 ರಂದು ನಾವು ಪ್ರತಿ ವರ್ಷದಂತೆ ದುಬೈನಿಂದ ಸಂತೆಬೆನ್ನೂರಿಗೆ ರಜೆಯಲ್ಲಿ ಬಂದಿರುವಾಗ ನಾನು ಹಾಗೂ ಚಾಸಾ 3 ರವರು ಅಡುಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿ ಇದ್ದಕ್ಕಿದ್ದ ಹಾಗೂ ಬಂದು ನನ್ನ ಅತ್ತೆ ಚಾಸಾ 1 ರವರಿಗೆ ಹೊಡೆದು ಸೀರೆಯನ್ನು ಎಳೆದಾಡಿರುತ್ತಾರೆ. ಗಲಾಟೆಯನ್ನು ಬಿಡಿಸಲು ನಾನು ಹೋದಾಗ ಆರೋಪಿಯು ನನಗೂ ಹೋಡೆದು ಕೂದಲನ್ನು ಎಳೆದಿರುತ್ತಾರೆ. ನಂತರ ಆರೋಪಿ ಮನೆಯಿಂದ ಹೊರಗೆ ಹೋದ ಮೇಲೆ ನನ್ನ ಅತ್ತೆಗೆ ನನ್ನ ಗಂಡ ಚಾಸಾ 3 ರವರು ವೈದ್ಯರಾದ್ದರಿಂದ ಚಾಸಾ 1 ರವರಿಗೆ ಚುಚ್ಚುಮದ್ದನ್ನು ನೀಡಿರುತ್ತಾರೆ. ಸದರಿ ಸಂಗತಿಯು ದಿಃ 11.07.2022 ರಂದ ರಾತ್ರಿ 8.00 ಗಂಟೆ ಸಮಯಕ್ಕೆ ಆಗಿರುತ್ತದೆ. ಆರೋಪಿಯು ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ. ಮರುದಿನ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದಿರುತ್ತೇನೆ. ಗಲಾಟೆಯನ್ನು ನಮ್ಮ ಮನೆಯ ಮುಂದಿನ ಸೈಕಲ್ ಶಾಪ್ ನಲ್ಲಿದ್ದ ವ್ಯಕ್ತಿ ಬಿಡಿಸಿರುತ್ತಾರೆ. ಸದರಿ ವಿಚಾರವಾಗಿ ನಾನು ಹೇಳಿಕೆಯನ್ನು ನೀಡಿರುತ್ತೇನೆ. ಚಾಸಾ 1 ರವರು ಹೃದಯಘಾತದಿಂದ ಮಾರ್ಚ್ 19 ರಂದು ಮರಣ ಹೊಂದಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

2008 ನೇ ಇಸವಿಯಲ್ಲಿ ಚಾಸಾ 3 ರವರು ಕೆಲವು ಜಮೀನುಗಳನ್ನು ಖರೀದಿಸಿದ್ದು ಸದರಿ ಜಮೀನಿನ ವಿಚಾರವಾಗಿ ಆರೋಪಿಗೂ ಹಾಗೂ ಚಾಸಾ 3 ರವರಿಗೂ ಗಲಾಟೆಯಾಗಿರುತ್ತದೆ ಎಂದರೆ ಸರಿ. ಆರೋಪಿಯು ಏರು ಧ್ವನಿಯಲ್ಲಿ ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದ ಶಬ್ದ ಕೇಳಿ ನಾನು ಅಡುಗೆ ಮನೆಯಿಂದ ಹಾಲ್ ಗೆ ಬಂದು ನೋಡಿರುತ್ತೇನೆ ಎಂದರೆ ಸರಿ. ಆರೋಪಿಯು ಚಾಸಾ 1 ರವರ ಬಟ್ಟೆ ಹಿಡಿದು ಎಳೆದಾಡಿ ನೂಕಿರುತ್ತಾರೆ ಎಂದರೆ ಸರಿ. ಗಲಾಟೆ ಬಿಡಿಸಲು ಹೋದ ನನಗೆ ಆರೋಪಿಯ ಕೈ ಮುಷ್ಠಿಯಿಂದ ಕುತ್ತಿಗೆಗೆ ಬಲವಾಗಿ ಹೊಡದು ಕೆಳಗೆ ಬಿಳಿಸಿ ಕೈಕಾಲುಗಳಿಂದ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. ಚಾಸಾ 4 ಮತ್ತು 5 ರವರು ಬಂದು ಗಲಾಟೆ

ಬಿಡಿಸಿರುತ್ತಾರೆ ಎಂದರೆ ಸರಿ. ಜಮೀನಿನ ತಂಟೆಟೆ ಬಂದರೆ ಜೀವ ಸಹಿತ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು – ಆರೋಪಿತರ ಪರ ವಕೀಲರಿಂದ –**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ರೂ. 500/- ಖರ್ಚಿನೊಂದಿಗೆ ನೀಡಲಾಯಿತು.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**Sd/-**

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**